ಶ್ರೀ ಬಿ. ಶಿವರಾಮು.—ನಾನು ಏನು ಪ್ರಶ್ನೆ ಕಳುಹಿಸಿದ್ದೇನೆ, ಅದರ ಜೆರಾಕ್ಸ್ ಪ್ರತಿ ನನ್ನ ಹತ್ತಿರ ಇದೆ. ನಾನು ಈ ಪ್ರಶ್ನೆ ಕೇಳಿದ್ದೇನೋ ಇಲ್ಲವೋ ಎಂದು ತಾವು ನೋಡಬಹುದು. ಇನ್ನು ಆಗಿರುವ ಅನ್ಯಾಯದ ಬಗ್ಗೆ ಅಧಿಕಾರಿಗಳಿಂದ ತನಿಖೆ ಮಾಡಿಸುತ್ತೇನೆಂದು ಹೇಳಿದ್ದಾರೆ. ಇದು ಸಂತೋಷದ ವಿಷಯ. ದಯವಮಾಡಿ ಇದನ್ನು ಆತಿ ಶೀಘ್ರವಾಗಿ ಮಾಡಬೇಕು. ನಮ್ಮ ಜಿಲ್ಲೆಯಲ್ಲಿ ಬಹಳ ಯೋಜನೆಗಳ ಬಗ್ಗೆ ತನಿಖೆ ಮಾಡಿಸುತ್ತೇನೆಂದು ಹೇಳಿದ್ದು ಸಿಂಡಿ ತನಿಖೆ ಮಾಡಿಸ ತ್ತೇವೆಂದು ಹೇಳಿದ್ದು ಅನೇಕ ಪೆಂಡಿಂಗ್ ಇವೆ ಈ ರೀತಿ ನಿಧಾನವಾದರೆ ಅಭಿವೃದ್ಧಿ ಕಾರ್ಯಕ್ರಮಗಳು ಕುಂಠಿತ ವಾಗುವುದರಿಂದ ತನಿಖೆ ಆತಿ ಶೀಘ್ರವಾಗಿ ಆಗಬೇಕೆಂದು ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ನಾನು ಈಗಾಗಲೇ ಹೇಳಿದ್ದೇನೆ. ನನ್ನ ಹತ್ತಿರ ಏನು ಪ್ರಶ್ನೆ ಬಂದಿದೆ ಅದಕ್ಕೆ ನಾನು ಉತ್ತರವನ್ನು ಕೊಟ್ಟಿದ್ದೇನೆ. ಒಂದುವೇಳೆ ತಮ್ಮ ಸೆಕ್ರೆಟೇರಿಯೇಟ್‌ನಲ್ಲಿ ಏನಾದರೂ ಕೈಬಿಟ್ಟು ಹೋಗಿದ್ದರೆ ಅದು ಬೇರೆ ವಿಷಯ. ಮತ್ತೊಂದು ಪ್ರಶ್ನೆ ಬಂದರೆ ನಾನು ಈಗಲೂ ಸಹಾ ಉತ್ತರ ಕೊಡುವುದಕ್ಕೆ ಸಿದ್ಧನಿದ್ದೇನೆ. ಮಾನ್ಯ ಸದಸ್ಯರು ಆ ಪ್ರಶ್ನೆಯನ್ನು ಕಳುಹಿಸಿಲ್ಲ ಎಂದು ನಾನು ಹೇಳಿಲ್ಲ. ಅದು ಯಾವ ಹಂತದಲ್ಲಿ ಎಲ್ಲಿ ಹೋಗಿದೆ ಎಂದು ಈಗ ಗೊತ್ತಾಗುವುದಿಲ್ಲ. ನೀವು ಹೇಳಿದ ಮೇಲೆಯೇ ಗೊತ್ತಾಗಿದ್ದು, ಇದರ ಬಗ್ಗೆ ನಾನು ಯಾವ ಸಂದರ್ಭದಲ್ಲಿ ಬೇಕಾದರೂ ಉತ್ತರ ಕೊಡುವುದಕ್ಕೆ ಸಿದ್ಧನಿದ್ದೇನೆ. ತಾವು ತನಿಖೆ ಬಗ್ಗೆ ತಿಳಿಸಿದ್ದೀರಿ. ಈ ಬಗ್ಗೆ ತಮಗೆ ಅನುಮಾನ ಬೇಕಾಗಿಲ್ಲ ಒಂದು ಸಾರಿ ಹೇಳಿದರೆ ಅದನ್ನು ಕಂಡುಕೊಳ್ಳುತ್ತೇನೆ ತನಿಖೆ ಮಾಡಿಸು ತ್ತೇನೆ ಮತ್ತು ವಿವರಗಳನ್ನು ತಿಳಿಸುತ್ತೇನೆ. ವಾಟರ್‌ಶೆಡ್ ಪ್ರೋಗ್ರಾಮ್ ಅನೇಕ ಇಲಾಖೆಗಳ ಕೈಕೆಳಗೆ ಬರುವುದರಿಂದ ತಾವು ಈಗ ಕೇಳಿದ ವಿವರಗಳನ್ನು ತಕ್ಷಣ ಕೊಡುವುದಕ್ಕೆ ಸಾಧ್ಯವಾಗುತ್ತಾ ಇಲ್ಲ.

ತಂಬಾಕು ಬೆಳೆಯುವ ರೈತರ ಬಗ್ಗೆ

೭೦೦. ಶ್ರೀ ಸುಭಾಶ್ ಜೋಷಿ.—(ನಿಪ್ಪಾಣಿ). – ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೀಡಿ ತಂಬಾಕು ಬೆಳೆಯುವ ರೈತರು ದಿಢೀರನೆ ತಂಬಾಕು ಬೆಲೆ ಇಳಿತದಿಂದಾಗಿ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ರೈತರಿಗೆ ಸಹಾಯ ಮಾಡಲು ಸರ್ಕಾರವು ಸೂಕ್ತಕ್ರಮ ತೆಗೆದುಕೊಳ್ಳುವುದೇ ;

ಇ) ಬೀಡಿ ತಂಬಾಕನ್ನು, ತಂಬಾಕು ಮಂಡಳಿಯು ಖರೀದಿಸುತ್ತಿರುವುದು ಸರ್ಕಾರಕ್ಕೆ ಅರಿವಿದೆಯೆ ?

ಶ್ರೀ ಎಸ್. ಬಂಗಾರಪ್ಪ (ಕೃಷಿ ಮತ್ತು ತೋಟಗಾರಿಕೆ ಸಚಿವರು).—

ಅ) ಹೌದು ಸ್ವಾಮಿ

ಆ) ಬೀಡಿ ತಂಬಾಕು ಬೆಳೆಗಾರರು ಅನುಭವಿಸುತ್ತಿರುವ ತೊಂದರೆಯನ್ನು ನಿವಾರಿಸಲು ಕೇಂದ್ರ ಸರ್ಕಾರವು ತಂಬಾಕು ಮಂಡಳಿಯು, ತನ್ನ ಕಾರ್ಯವ್ಯಾಪ್ತಿಯನ್ನು ಬೀಡಿ ತಂಬಾಕಿಗೂ ಸಹಾ ವಿಸ್ತರಿಸುವಂತೆ ನಿರ್ಧಾರ ತೆಗೆದುಕೊಂಡಿದೆ. ಇದರಂತೆ ತಂಬಾಕು ಮಂಡಳಿಯು ಬೀಡಿ ತಂಬಾಕಿನ ಪ್ರದೇಶವನ್ನು ಅಭಿವೃದ್ಧಿಪಡಿಸುವುದು, ಉತ್ಪಾದನೆ, ಮಾರಾಟ ಮತ್ತು ಬೆಲೆ ನಿರ್ಧಾರದ ಬಗ್ಗೆ ನಿಯಂತ್ರಿಸುವ ಬಗ್ಗೆ ಕ್ರಮ ತೆಗೆದುಕೊಳ್ಳುವುದು.

ಇ) ತಂಬಾಕು ಮಂಡಳಿಯು ನೇರವಾಗಿ ಬೀಡಿ ತಂಬಾಕನ್ನು ಖರೀದಿಸುವುದಿಲ್ಲ. ಮಂಡಳಿಯು ಮಾರಾಟಗಾರರು ತಂಬಾಕು ಖರೀದಿಸಲು ಅನುಕೂಲವಾಗುವಂತೆ ಹರಾಜನ್ನು ನಡೆಸುತ್ತದೆ. ಪ್ರಥಮ ಹಂತದಲ್ಲಿ ಇದು ನಿಪ್ಪಾಣಿಯಲ್ಲಿ ಬೀಡಿ ತಂಬಾಕಿನ ಹರಾಜನ್ನು ನಡೆಸಿದೆ.

Sri Subhash Joshi.—Sir, I had asked, whether the Government is aware that the Bidi Tobacco farmers are in trouble due to sudden fall in tobacco price and if so, whether the Government would take measures to help the farmers. The Government have replied about the measures taken by the Government of India. I would like to know, what are the measures this Government is going to take.

Sri S. Bangarappa.—Sir, this matter completely comes under the purview of the Government of India. Actually the State Government has got very limited scope to deal with the matters pertaining to Bidi Tobacco growers. There is a Tobacco Board constituted by the Government of India which deals with so many aspects of the matter including the production, marketing, fixation of prices for Bidi tobacco etc. The only thing the State Government can do in the matter is, we can try to prevail upon the Government of India and also the Tobacco Board to give its utmost attention towards the problemes of Beedi tobacco growing farmers particularly of Nipani area and also request them to give fair prices and so many other incentives for better production.

Sri Subhash Joshi.—Whether these incentivs have already been given or are you going to give in future ?

Sri S. Bangarappa.—Sir, actually we are not going to give incentives. The State Government is not giving any incentives to the beedi tobacco growers. It is given by the Tobacco Board constituted by the Governments of India. Therefore, as I have already said, we are going to impress upon the Government of India and also the Tobacco Board to give utmost attention to the problems of Bidi Tobacco growers and give certain incentives taking into account the total increased production of Bidi robacco.

ಹತ್ತಿ ಮಂಡಳಿ ಅಥವಾ ನಿಗಮವನ್ನು ರಚಿಸಂವುದು

೯೮೧. ಶ್ರೀಮತಿ ಚಂದ್ರಪ್ರಭಾ ಅರಸ್ (ಹುಣಸೂರು) —ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರೇಷ್ಮೆ ಮಂಡಳಿ ಮತ್ತು ತಂಬಾಕು ಮಂಡಳಿಯಂತೆ ಹತ್ತಿಗಾಗಿ ಮಂಡಳಿ ಅಥವಾ ನಿಗಮ ಸ್ಥಾಪಿಸಲು ಸರ್ಕಾರ ಏನಾದರೂ ತೀರ್ಮಾನ ತೆಗೆದುಕೊಂಡಿದೆಯೇ ?

ಆ) ಹಾಗಿದ್ದಲ್ಲಿ ಇದನ್ನು ಯಾವಾಗ ಸ್ಥಾಪಿಸಲಾಗುವುದು.

ಶ್ರೀ ಎಸ್. ಬಂಗಾರಪ್ಪ (ಕೃಷಿ ಮತ್ತು ತೋಟಗಾರಿಕೆ ಸಚಿವರು),—

ಅ) ಮತ್ತು ಆ) ಕೇಂದ್ರ ಸರ್ಕಾರವು ಈಗಾಗಲೇ ಭಾರತ ಹತ್ತಿ ನಿಗಮವನ್ನು ಸ್ಥಾಪಿಸಿದೆ ಈ ಕಾರಣಕ್ಕಾಗಿ ಹತ್ತಿಗಾಗಿ ಮಂಡಳಿ ಅಥವಾ ನಿಗಮ ಒಂದನ್ನು ಸ್ಥಾಪಿಸುವ ಪ್ರಸ್ತಾವನೆ ರಾಜ್ಯ ಸರ್ಕಾರದ ಮುಂದಿರುವುದಿಲ್ಲ.

ಶ್ರೀಮತಿ ಚಂದ್ರಪ್ರಭಾ ಅರಸ್ .—ಮಾನ್ಯ ಅಧ್ಯಕ್ಷರೇ, ನಮ್ಮ ಕರ್ನಾಟಕ ರಾಜ್ಯದಲ್ಲಿ ಪ್ರಮುಖವಾದ ವ್ಯಾಪಾರಿ ಬೆಳೆ ಅಂದರೆ ತಂಬಾಕು ಮತ್ತು ಎಣ್ಣೆಕಾಳುಗಳ ಜೊತೆಗೆ ಹತ್ತಿ ಕೂಡಾ ಒಂದು ಪ್ರಮುಖವಾದ ವ್ಯಾಪಾರಿ ಬೆಳೆ ಆಗಿದೆ. ರೈತರಿಗೆ ಇಪತ್ತಿನ ದಿವಸ ಇದಕ್ಕೆ ಹಾಕಬೇಕಾದ ಕೆಮಿಕಲ್ ಮೆನ್ಯೂರ್ಸ್, ಸೀಮೆಗೊಬ್ಬರ, ಔಷಧಿಗಳನ್ನು ಸಿಂಪಡಿಸಲು ಸಾಕಷ್ಟು ಖರ್ಚು ತಗಲುತಿದ್ದು ಈಗ ಹತ್ತಿ ಬೆಳೆಗೆ ಸರಿಯಾದ ಬೆಂಬಲ ಬೆಲೆ ಸಿಗುತ್ತಾ ಇಲ್ಲ. ಇವತ್ತು ಏನು ಸಬ್ಸಿಡೈಸ್ ಪ್ರೈಸ್ ಕ್ವಿಂಟಾಲಿಗೆ ೧ ಸಾವಿರ ರೂಪಾಯಿ ಸಿಗುತ್ತದೆಂದು ಬೆಳೆ ಬೆಳೆದ ರೈತನಿಗೆ ೪೦೦ ರೂಪಾಯಿ, ೫೦೦ ರೂಪಾಯಿ ಸಹಾ ಸಿಗುವುದು ಕಷ್ಟವಾಗಿದೆ. ಇವತ್ತು ಹತ್ತಿ ವಿದೇಶಗಳಿಗೆ ರಫ್ತು ಆಗುತ್ತಿದ್ದರೂ ಕೂಡಾ ಅದಕ್ಕೆ ಬೆಂಬಲ ಬೆಲೆ ಸಿಗದೇ ರೈತರು ಕಂಗಾಲಾಗಿದ್ದಾರೆ. ಆದ್ದರಿಂದ ಸರ್ಕಾರ ಇಸ್ತ ಗಮನಹರಿಸಿ ಅವರಿಗೆ ಬೆಂಬಲ ಬೆಲೆ ಸಿಗುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಕಳಕಳಿಯನ್ನು ನಾವು ಅರ್ಥಮಾಡಿಕೊಂಡಿದ್ದೇವೆ. ಹಿಂದೆ ಕೂಡಾ ಈ ವಿಚಾರ ಪ್ರಸ್ತಾಪ ಆಗಿತ್ತು. ನಮ್ಮಲ್ಲಿ ಡಿಸಿಪೆಚ್ ಇತ್ಯಾದಿ ಹತ್ತಿಗೆ ತುಂಬಾ ಬೆಲೆ ಕೂಡಾ ಇದೆ. ಆದರೆ ಮಾರ್ಕೆಟ್‌ನಲ್ಲಿ ಏನಾಗಿದೆ ಎಂದರೆ, ಯಾವ